ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ, ಕಾರವಾರ – 581 301
DISTRICT URBAN DEVELPOMENT CELL, D.C. OFFICE UTTARA KANNADA DISTRICT, KARWAR-581 301

ದೂರವಾಣಿ : 08382 221170
Telephone: 08382 221170 (Fax)
Email: itstaffdudckarwar@gmail.com

ನಂ. ಡಿಯುಡಿಸಿ/ವಿವ /ಕರಾವಳಿ ಉತ್ಸವ/2017-18 /121 ದಿನಾಂಕ: 03-11-2017

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಯಾವತ್ತು ಸಿಸಿ ಕ್ಯಾಮೇರಾ ಅಳವಡಿಸುವ ಕಂಪನಿ/ತಾಂತ್ರಿಕ ತಜ್ಞರಿಗೆ ಈ ಮೂಲಕ ತಿಳಿಯಪಡಿಸುವುದೆನೆಂದರೆ,

ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವಿಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರ ವರ್ಮ ವೇದಿಕೆಯಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ನೇ ಡಿಸೆಂಬರ್ 2017 ರಂದು ಜರುಗಲಿರುತ್ತದೆ. ಇದರ ಅಂಗವಾಗಿ ಸಾರ್ವಜನಿಕರಿಗೆ ವಿವಿಧ ಕ್ರೀಡಾ ಸ್ಪರ್ಧೆ, ವಸ್ತು ಪ್ರದರ್ಶನ ಹಾಗೂ ಮನೋರಂಜನೆಗೊಸ್ಕರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಇದಕ್ಕಾಗಿ ಪ್ರತಿದಿನ ಅಜಮಾಸ 30,000-50,000 ಜನರು ಕಡಲ ತೀರದಲ್ಲಿ ಇರುವ ಮಯೂರವರ್ಮ ವೇದಿಕೆಯ ಸುತ್ತಲೂ ಸೇರುವುದರಿಂದ, ಯಾವುದೇ ರೀತಿಯ ಅಹಿತಕರ ಘಟಣೆ ಮತ್ತು ವಾಹನಗಳ ಕಳ್ಳತನ ಆಗದಂತೆ ತಡೆಯುವಗೊಸ್ಕರ ಸಾರ್ವಜನಿಕರ ಮತ್ತು ವಾಹನಗಳ ಚಲನವಲನ ಮೇಲೆ ನಿಗಾ ಇಡುವ ಕುರಿತು ಸಿಸಿ ಕ್ಯಾಮೇರಾ ಅಳವಡಿಸಲು ಈ ಕೆಳಗಿನ ಶರ್ತಿಗೆ ಒಳಪಟ್ಟು ಟೆಂಡರ ಕರೆಯಲಾಗಿರುತ್ತದೆ. ಟೆಂಡರ ಸಲ್ಲಿಸುವ ಅಂತಿಮ ದಿನಾಂಕ:22-11-2017 ರಂದು 16-00 ಗಂಟೆಯೊಳಗೆ ದರವಾರವನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಇಟ್ಟ ಟೆಂಡರ್ ಪೆಟ್ಟಿಗೆಯಲ್ಲಿ ದರವಾರವನ್ನು ಅಧಿಕೃತ ಟೆಂಡರ್ ನಮೂನೆಯಲ್ಲಿ ಸಲ್ಲಿಸಬಹುದಾಗಿದೆ. ಟೆಂಡರ್ ನಮೂನೆಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶದಿಂದ ಪಡೆದುಕೊಳ್ಳಬಹುದಾಗಿದೆ. ಅವಧಿ ಮೀರಿ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಉ.ಕ. ಕಾರವಾರ ಇವರಿಗೆ ದೂರವಾಣಿ ಸಂಖ್ಯೆ 08382-221170 ಅಥವಾ ಮೊಬೈಲ್ ನಂ. 9448120430 ಅಥವಾ ಇ-ಮೇಲ್– itstaffdudckarwar@gmail.com ಮೂಲಕ ಸಂಪರ್ಕಿಸಬಹುದಾಗಿದೆ.

1. ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 22-11-2017 ರಂದು 16-00 ಗಂಟೆ
2. ಟೆಂಡರ್ ತೆರೆಯುವ ದಿನಾಂಕ: 23-11-2017 ರಂದು 17-00 ಗಂಟೆ
3. ಮುಂಗಡ ಠೇವಣಿ ರೂ. 5,000/- (ಡಿ.ಡಿ ಮೂಲಕ)
4. ಕಾಮಗಾರಿ ಮುಕ್ತಾಯಗೊಳಿಸಲು ನಿಗದಿಪಡಿಸಿದ ಅವಧಿ 7 ದಿನಗಳು

**ಶರ್ತುಗಳು:**

1) ಸ್ವೀಕೃತವಾದ ಟೆಂಡರ್‌ಗಳನ್ನು ಹಾಜರಿದ್ದ ಟೆಂಡರ್‌ದಾರರು ಅಥವಾ ಅವರ ಅಧಿಕೃತ ಪ್ರತಿನಿಧಿಗಳ ಎದುರಿನಲ್ಲಿ ದಿನಾಂಕ: 23-11-2017 ರಂದು 17-00 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯ ಕೋರ್ಟ್ ಹಾಲ್‌ನಲ್ಲಿ ತೆರೆಯಲಾಗುವುದು.

2) ಮಯೂರವರ್ಮ ವೇದಿಕೆಯ ಸುತ್ತಮುತ್ತಲು ಕನಿಷ್ಠ 16 ರಿಂದ ಗರಿಷ್ಠ 32 ಹಗಲು ಮತ್ತು ರಾತ್ರಿ ಸಮಯದಲ್ಲಿ ಕಾರ್ಯನಿರ್ವಹಿಸುವಂತಹ ಸಿಸಿ ಕ್ಯಾಮರಾ ಅಳವಡಿಸಿ ಪೋಲೀಸ್ ನಿಯಂತ್ರಣ ಕೊಠಡಿಯಲ್ಲಿ 32 ಇಂಚ ಟಿವಿ ಪರದೆಯಲ್ಲಿ ಎಲ್ಲಾ ಕ್ಯಾಮೇರಾಗಳ ಜೋಡಣೆಯನ್ನು ಮಾಡಿಕೊಡುವುದು.

3) ಉತ್ಸವ ಮುಗಿದ ನಂತರ ಅಳವಡಿಸಿದ ಸಿಸಿ ಕ್ಯಾಮರಾ, ಟೇಬಲ್, ಇತ್ಯಾದಿ ಸಾಮಗ್ರಿಗಳನ್ನು ಜಿಲ್ಲಾಡಳಿತಕ್ಕೆ ನೀಡತಕ್ಕದ್ದು.

4) ಸಿಸಿ ಕ್ಯಾಮೇರಾ ಸ್ಥಳ ಮತ್ತು ನಿಯಂತ್ರಣ ಕೊಠಡಿಯಲ್ಲಿ ಬೇಕಾಗುವ ವ್ಯವಸ್ಥೆಯನ್ನು ಸಂಬಂಧಪಟ್ಟ ಪೋಲೀಸ್ ಇಲಾಖೆಯ ಅಧಿಕಾರಿಗಳು ನೀಡುವ ಸಲಹೆ ಸೂಚನೆಗಳನ್ನು ಪಾಲಿಸಿ ಅವರ ಅಧೀನದಲ್ಲಿ ಕೆಲಸವನ್ನು ಕೈಗೊಳ್ಳತಕ್ಕದ್ದು.

5) ಸಿಸಿ ಕ್ಯಾಮೇರಾ, ವಿದ್ಯುತ್, ಟಿವಿ ಇತ್ಯಾದಿಯನ್ನು ತಾವು ಸ್ವಂತವಾಗಿ ವ್ಯವಸ್ಥೆ ಮಾಡಿಕೊಳ್ಳತಕ್ಕದ್ದು ಹಾಗೂ ಟೆಂಡರ್ ಫಾರ್ಮನಲ್ಲಿ ತೋರಿಸಿದ ಸಂಖ್ಯೆಗಳು ಹೆಚ್ಚು ಅಥವಾ ಕಡಿಮೆ ಆದರೆ ಅದರಂತೆ ನಿರ್ವಹಿಸಿ ಕೊಡಲು ಬದ್ಧರಿರತಕ್ಕದ್ದು ಮತ್ತು ತಮ್ಮ ಸಾಮಗ್ರಿಗಳ ಭದ್ರತೆಯನ್ನು ತಾವೇ ಮಾಡಿಕೊಳ್ಳುವುದು.

6) ಕರಾವಳಿ ಉತ್ಸವ-2017 ಮುಕ್ತಾಯವಾದ ನಂತರ ಸಂಪೂರ್ಣ 3 ದಿನಗಳ ಪ್ರತ್ಯೇಕ ಡಿವಿಡಿಯನ್ನು ಪ್ರಿಂಟ್ ಮಾಡಿ 2 ಪ್ರತಿಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಗೆ ನೀಡತಕ್ಕದ್ದು.

7) ಕರಾವಳಿ ಉತ್ಸವ-2017 ಪೂರ್ಣಗೊಂಡ ನಂತರ ಸಂಬಂಧಪಟ್ಟ ಭದ್ರತಾ ಸಮಿತಿಯಿಂದ ಕಾಮಗಾರಿ ಬಾಬ್ತು ಪ್ರಮಾಣ ಪತ್ರ ಪಡೆದು ಸಲ್ಲಿಸಿದ ನಂತರ ಬಿಲ್ ಪಾವತಿ ಮಾಡಲಾಗುವುದು.

8) ಸಿಸಿ ಕ್ಯಾಮೇರಾ ಈ ಹಿಂದೆ ಸರ್ಕಾರಿ ಅಥವಾ ಖಾಸಗಿ ಈ ರೀತಿಯ ಕಾರ್ಯಕ್ರಮದಲ್ಲಿ ಅಳವಡಿಸಿದ ಬಗ್ಗೆ ಪ್ರಮಾಣ ಪತ್ರ/ಅನುಭವ ಪತ್ರ ಟೆಂಡರೊಂದಿಗೆ ಲಗ್ತ ಇಡುವುದು.

9) ಈ ಟೆಂಡರ್ ಸಂಬಂಧ ಕರಾವಳಿ ಉತ್ಸವ ಸಮಿತಿ/ಕಾರ್ಯಪಾಲಕ ಅಭಿಯಂತರರು/ ಜಿಲ್ಲಾಧಿಕಾರಿಗಳ ನಿರ್ಣಯವು ಅಂತಿಮವಾಗಿರುತ್ತದೆ. ದರವಾರು ಎಲ್ಲಾ ತೆರಿಗೆ ಸೇರಿಸಿ ನೀಡತಕ್ಕದ್ದು.

10) ಟೆಂಡರ್ ಫಾರ್ಮನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉ.ಕ. ಕಾರವಾರ ಕಚೇರಿಯಿಂದ ಶುಲ್ಕ ರಹಿತವಾಗಿ ಪಡೆದುಕೊಳ್ಳಬಹುದು.

11) ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಇರುವ ಸಿಸಿ ಕ್ಯಾಮರಾ ಈ ಕಾರ್ಯಕ್ಕೆ ಉಪಯೋಗಿಸಿ, ಕಡಿಮೆ ಬಿದ್ದಲ್ಲಿ ಮಾತ್ರ ಹೆಚ್ಚುವರಿ ಸಿಸಿ ಕ್ಯಾಮರಾಗಳನ್ನು ಅಳವಡಿಸಬಹುದಾಗಿದೆ.

ಅಧ್ಯಕ್ಷರು ಟೆಂಡರ್ ಸಮಿತಿ ಕರಾವಳಿ ಉತ್ಸವ-2017 ಮತ್ತು
ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ,
ಉತ್ತರ ಕನ್ನಡ, ಕಾರವಾರ

# ಟೆಂಡರ್ ಫಾರ್ಮ

**ವಿಷಯ** :-ಉತ್ತರ ಕನ್ನಡ ಜಿಲ್ಲೆಯ ಕಾರವಾರದ ರವಿಂದ್ರನಾಥ ಕಡಲ ತೀರದಲ್ಲಿ ಇರುವ ಮಯೂರ ವರ್ಮ ವೇದಿಕೆಯಲ್ಲಿ ಕರಾವಳಿ ಉತ್ಸವ-2017 ದಿನಾಂಕ: 08, 09, 10 ನೇ ಡಿಸೆಂಬರ್ 2017 ರಂದು ಜರುಗಲಿರುತ್ತದೆ. ಆ ಸಂಬಂಧ ಸಿಸಿ ಕ್ಯಾಮೆರಾ ಅಳವಡಿಸುವ ಕುರಿತು.

## ಎ) ಸಾಮಾನ್ಯ ಮಾಹಿತಿ :

1. ಟೆಂಡರ್‌ದಾರರ ಹೆಸರು :

2. ಟೆಂಡರದಾರರ ವಿಳಾಸ :

3. ಟೆಂಡರ್‌ದಾರರು ಹೊಂದಿರುವ ಪಾನ ಕಾರ್ಡ ಸಂಖ್ಯೆ :

4. ಟೆಂಡರದಾರರು ಹೊಂದಿರುವ ಆಧಾರಕಾರ್ಡ ಸಂಖ್ಯೆ :

5. ಟೆಂಡರದಾರರು ಹೊಂದಿರುವ ಸರ್ವಿಸ್ ಟ್ಯಾಕ್ಸ್ / ವ್ಯಾಟ್ ನೊಂದಣಿ ಸಂಖ್ಯೆ :

6. ಟೆಂಡರ್‌ದಾರರು ಹೊಂದಿರುವ ಜಿಎಸ್‌ಟಿ ನೋಂದಣಿ ಸಂಖ್ಯೆ

**ಸೂಚನೆ :**

ಈ ಮೇಲೆ ನಮೂದಿಸಿದ ದಾಖಲೆಗಳ ಪ್ರತಿಯನ್ನು ಟೆಂಡರನಲ್ಲಿ ಮೂಲಕ ಸಲ್ಲಿಸತಕ್ಕದ್ದು.

ಬಿ) ಟೆಂಡರದಾರರು ನಿರ್ವಹಿಸುವ ಕಾಮಗಾರಿಗಳ ವಿವರಣೆ :

| ಕ್ರ.ಸಂ | ಕಾಮಗಾರಿಗಳ ವಿವರಣೆ | ಪ್ರಮಾಣ | ದರ ಪ್ರತಿ ಒಂದಕ್ಕೆ | ಅಂತೂ ಮೊತ್ತ |
|---|---|---|---|---|
| 1 | 32 ಚೆನಲ್ ಹಗಲು ಮತ್ತು ರಾತ್ರಿ ಕಾರ್ಯ ನಿರ್ವಹಿಸುವ ಡಿಜಿಟಲ್ ಕನಿಷ್ಟ 100 ಮೀ. ದೂರದ ಚಿತ್ರಗಳನ್ನು ಸೆರೆ ಹಿಡಿಯುವ ಸಾಮರ್ಥ್ಯ ಇರುವ ಸಿಸಿ ಟಿ.ವಿ. ಕ್ಯಾಮರಾವನ್ನು 15-20 ಅಡಿ ಎತ್ತರದಲ್ಲಿ ಕಂಬ ಸಮೇತ ಅಳವಡಿಸುವುದು. ಅದಕ್ಕೆ ಬೇಕಾಗುವ ವಿದ್ಯುತ್, ಜನರೇಟರ್ ಇತ್ಯಾದಿ ಸಮೇತ | 1 job | | |
| 2 | ಪೋಲೀಸ್ ನಿಯಂತ್ರಣ ಕೊಠಡಿಯಲ್ಲಿ 32 ಇಂಚು ಟಿ.ವಿ. ಅಳವಡಿಸುವುದು ಹಾಗೂ ಪೋಲೀಸ್‌ರಿಗೆ ಬೇಕಾಗುವ ತಾಂತ್ರಿಕ ಮಾಹಿತಿ ಹಾಗೂ ಪೋಲೀಸ್ ನಿಯಂತ್ರಣ ಕೊಠಡಿಯಲ್ಲಿ 5 ಖುರ್ಚಿ, 2 ಟೇಬಲ್, 1 ಫ್ಯಾನ್ ಸಂಗಡ ವಿದ್ಯುತ ದೀಪ ವ್ಯವಸ್ಥೆ ಮಾಡುವುದು . ಇದಕ್ಕೆ ಬೇಕಾಗುವ ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಸಹ ಮಾಡಿಕೊಡುವುದು. | 1 job | | |
| 3 | ಪೋಲೀಸ್‌ರಿಗೆ ಕರಾವಳಿ ಉತ್ಸವ ನಡೆಯುವ ಮೈದಾನದಲ್ಲಿ ನಿಗಾ ಇಡಲು 5 ಅಡಿ ಎತ್ತರದ ಪೋಲೀಸ್ ಪ್ಲ್ಯಾಟಫಾರ್ಮ 8X4 ಅಡಿ ಉದ್ದಗಲದ ಏಣಿ ಸಮೇತ ಅಳವಡಿಸಿ ಅದರ ಮೇಲೆ 2 ಖುರ್ಚಿಗಳನ್ನು ಕುಳಿತುಕೊಳ್ಳಲು ಅವಕಾಶ ಮಾಡುವುದು. | 4 ಸಂಖ್ಯೆ | | |
| 4 | 32 ಚೆನಲ್ ಹಗಲು ಮತ್ತು ರಾತ್ರಿ ಕಾರ್ಯ ನಿರ್ವಹಿಸುವ ಡಿಜಿಟಲ್ 2 ಮೆಗಾಪಿಕ್ಸಲ್ ಬುಲೆಟ್ ಸಿ.ಸಿ. ಕ್ಯಾಮರಾ ಮತ್ತು ಪಿಟಿರೆಯುಡ್ ಸಿ.ಸಿ. ಕ್ಯಾಮರಾಗಳನ್ನು ಕನಿಷ್ಟ 100 ಮೀ. ದೂರದ ಚಿತ್ರಗಳನ್ನು ಸೆರೆ ಹಿಡಿಯುವ ಸಾಮರ್ಥ್ಯ ಇರುವ ಕ್ಯಾಮರಾಗಳನ್ನು 15-20 ಅಡಿ ಎತ್ತರದಲ್ಲಿ ಕಂಬ ಸಮೇತ ಅಳವಡಿಸುವುದು ಮತ್ತು ಅವುಗಳನ್ನು ವೀಕ್ಷಣೆ ಮಾಡಲು ಪೋಲೀಸ್ ನಿಯಂತ್ರಣ ಕೇಂದ್ರದಲ್ಲಿ 32 ಇಂಚು ಟಿ.ವಿ. ಅಳವಡಿಸಿ ವೀಕ್ಷಣೆಗೆ ಅವಕಾಶ ಮಾಡುವುದು. ಅದಕ್ಕೆ ಬೇಕಾಗುವ ವಿದ್ಯುತ್, ಜನರೇಟರ್ ಇತ್ಯಾದಿ ಸಮೇತ | | | |
| | ಎ) ಡಿಜಿಟಲ್ 2 ಮೆಗಾಪಿಕ್ಸಲ್ ಬುಲೆಟ್ ಸಿ.ಸಿ. ಕ್ಯಾಮರಾ | 10 | | |
| | ಬಿ) ಪಿಟಿರೆಯುಡ್ ಸಿ.ಸಿ. ಕ್ಯಾಮರಾ | 4 | | |
| | | | | |
| | ಅಂತೂ | | | |

ಟೆಂಡರ್‌ದಾರರ ಸಹಿ ___________________